**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಹೆಗ್ಗಡದೇವನಕೋಟೆ.</u>**

**ಉಪಸ್ಥಿತರುಃ**
**ಶ್ರೀ. ಕೇಶವ. ಕೆ.** ಬಿ.ಎ.ಎಲ್ಎಲ್‌ಬಿ.
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ**
**ಹೆಗ್ಗಡದೇವನಕೋಟೆ.**

**ದಿನಾಂಕಃ 24ನೇ ಫೆಬ್ರವರಿ 2018**

**<u>ಅಸಲು ದಾವಾ ಸಂಖ್ಯೆಃ 192/2017</u>**

**ವಾದಿಗಳು ಃ ಶ್ರೀಮತಿ ಮಮತಾಕುಮಾರಿ ಬಿ ವಿ ಮತ್ತು ಇತರರು**

**ವಿರುದ್ಧ**

**ಪ್ರತಿವಾದಿಗಳು ಃ ಶ್ರೀಮತಿ ಮಾಯಮ್ಮ ಮತ್ತು ಇತರರು**

**<u>ಮಧ್ಯಕಾಲಿನ ಅರ್ಜಿ ಸಂಖ್ಯೆಃ 01</u>**

**ಅರ್ಜಿದಾರರು ಃ ಶ್ರೀಮತಿ ಮಮತಾಕುಮಾರಿ ಬಿ ವಿ – (ವಾದಿ)**

**ವಿರುದ್ಧ**

**ಎದುರುದಾರರು ಃಶ್ರೀಮತಿ ಮಾಯಮ್ಮ ಮತ್ತು ಇತರರು– (ಪ್ರತಿವಾದಿಗಳು)**

**<u>ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಹಾಗೂ ಸಹವಾಚಕ ಕಲಂ 151 ರ ರೀತ್ಯಾ ಸಲ್ಲಿಸಲಾದ ಅರ್ಜಿಯ ಮೇಲೆ ಆದೇಶ</u>**

ವಾದಿಗಳು ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಕಾನೂನುಬದ್ದ ವಿಭಾಗಾಂಶದ ಹಕ್ಕಿಗಾಗಿ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಈ ದಾವೆಯನ್ನು

ಸಲ್ಲಿಸಿರುತ್ತಾರೆ. ಅದರೊಂದಿಗೆ ಮಧ್ಯಂತರ ಅರ್ಜಿ ಸಂಃ 1 ನ್ನು ಸಲ್ಲಿಸಿ ದಾವಾ ಅನಸೂಚಿ ಸ್ವತ್ತುಗಳನ್ನು ಬೇರೆ ಯಾರಿಗೂ ವಾರಾಟ ಯಾ ಪರಭಾರೆ ಮಾಡದಂತೆ ಈ ದಾವೆಯು ಇತ್ಯರ್ಥವಾಗುವವರೆಗೆ ತಾತ್ಕಾಲಿಕ ಪ್ರತಿಬಂಧಕಾಜ್ಞೆಯ ಆದೇಶವನ್ನು ಪ್ರತಿವಾದಿಗಳ ವಿರುದ್ಧ ನೀಡುವಂತೆ ಕೋರಿಕೊಂಡಿರುತ್ತಾರೆ.

2. ಮಧ್ಯಂತರ ಅರ್ಜಿ 1 ರ ಸಂಕ್ಷಿಪ್ತ ಸಾರಾಂಶವೇನೆಂದರೆಃ-

1ನೇ ವಾದಿಯು 2 ರಿಂದ 4ನೇ ವಾದಿಗಳ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಹಾಜರಾಗಿ 2ನೇ ವಾದಿಯಿಂದ 4ನೇ ವಾದಿಗಳಿಗೆ ಸೇರಬೇಕಾದ ಕಾನೂನುಬದ್ಧ ವಿಭಾಗವನ್ನು ದಾವಾ ಅನುಸೂಚಿ ಸ್ವತ್ತುಗಳ ಮೇಲೆ ವಿಭಾಗಾಂಶ ಮತ್ತು ಪ್ರತ್ಯೇಕ ಸ್ವಾ ಧೀನತೆಗಾಗಿ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಹೂಡಿರುತ್ತಾರೆ. 3ನೇ ಪ್ರತಿವಾದಿಯು 1ನೇ ವಾದಿಯ ಗಂಡನಾಗಿರುತ್ತಾರೆ. 2 ರಿಂದ 4ನೇ ವಾದಿಗಳು 1ನೇ ಹಾಗೂ 3ನೇ ಪ್ರತಿವಾ ದಿಗಳ ಮಕ್ಕಳಾಗಿರುತ್ತಾರೆ. 2 ರಿಂದ 7ನೇ ಪ್ರತಿವಾದಿ ಗಳಿಗೆ ಲೇಟ್ ನಿಂಗೇಗೌಡ ಮತ್ತು 1ನೇ ಪ್ರತಿವಾದಿಯು ತಂದೆ ತಾಯಿಯಾಗಿರುತ್ತಾರೆ. ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಹಾಗೂ 3 ಜನ ಗಂಡು ಮಕ್ಕಳಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು ಒಟ್ಟು ಕುಟುಂಬ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಾ ದಿಗಳು ಮತ್ತು ಪ್ರತಿವಾದಿಗಳು ಜಂಟಿಯಾಗಿ ಅನುಭವಿಸುತ್ತಿದ್ದಾರೆ. ದಾವಾ ಸ್ವತ್ತು ಗಳನ್ನು 1, 3, 4 ಮತ್ತು 5ನೇ ಪ್ರತಿವಾದಿಗಳು ಜಂಟಿಯಾಗಿ ಖಾತೆ ಮಾಡಿಸಿಕೊಂಡು, 2 ರಿಂದ 4ನೇ ವಾದಿಗಳಿಗೆ ಯಾವುದೇ ವಿಧವಾದ ಆಸ್ತಿಗಳನ್ನಾಗಲೀ ಹಾಗೂ ಇನ್ನಿತ್ತರ ಆದಾಯಗಳನ್ನಾಗಲೀ ಕೊಡದೇ ಮನೆ ಯಿಂದ ಹೊರ ಹಾಕಿ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ವಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುವುದರಿಂದ ವಾದಿಗಳಿಗೆ ಕಾನೂನು ಬದ್ದ ಸಮಾನ ಹಕ್ಕು, ಅ ಧಿಕಾರ, ಹಿತಾಸಕ್ತಿ ಇರುತ್ತದೆ. ಒಂದು ವೇಳೆ ಮಧ್ಯಂತರ ಅರ್ಜಿ 1ನ್ನು ಈ ಘನ ನ್ಯಾಯಾಲಯವು ಪುರಸ್ಕರಿಸಿದ್ದಲ್ಲಿ ಪ್ರತಿವಾದಿಗಳಿಗೆ ಯಾವುದೇ ರೀತಿಯ ತೊಂದರೆ

ಉಂಟಾಗು ವುದಿಲ್ಲವೆಂದು, ಒಂದು ವೇಳೆ ಸದರಿ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ 2 ರಿಂದ 4ನೇ ವಾದಿಗಳಿಗೆ ತುಂಬಲಾರದ ನಷ್ಟ ಮತ್ತು ತೊಂದರೆ ಉಂಟಾಗುತ್ತದೆಂದು ಭಿನ್ನವಿಸಿಕೊಂಡು ಈ ಮಧ್ಯಂತರ ಅರ್ಜಿ 1ನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಅದೇರೀತಿ ಪ್ರತಿವಾದಿಗಳು ನ್ಯಾಯಾಲಯದ ಸಮನ್ಸ್‌ನ್ನು ಪಡೆದು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. 3ನೇ ಪ್ರತಿವಾದಿ ತಮ್ಮ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಇತರ ಪ್ರತಿವಾದಿಗಳು ಸದರಿ ಲಿಖಿತ ಪ್ರತಿವಾದ ಪತ್ರವನ್ನೇ ಮಧ್ಯಂತರ ಅರ್ಜಿ 1 ರ ಮೇಲಿನ ತಕರಾರು ಅರ್ಜಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡು ಸಲ್ಲಿಸಿರುವ ಜ್ಞಾಪನ ಪತ್ರವನ್ನು ಈ ನ್ಯಾಯಾಲಯವು ಪುರಸ್ಕರಿಸಲಾಗಿರುತ್ತದೆ. ಅದರಂತೆ ವಾದಿಯು ತಿಳಿಸಿರುವ ವಂಶ ವೃಕ್ಷವು ಪ್ರತಿವಾದಿಗಳು ಒಪ್ಪಿಕೊಂಡಿದ್ದು, ಉಳಿದ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಪ್ರತಿವಾದಿಗಳ ಪ್ರಕಾರ 1 ಮತ್ತು 3ನೇ ಷೆಡ್ಯೂಲ್ ಸ್ವತ್ತುಗಳು ಮಾತ್ರ ಪಿತ್ರಾರ್ಜಿತ ಸ್ವತ್ತು ಗಳಾಗಿರು ತ್ತವೆ. 4 ಮತ್ತು 5ನೇ ಷೆಡ್ಯೂಲ್ ಸ್ವತ್ತುಗಳು 3 ಮತ್ತು 6ನೇ ಪ್ರತಿವಾದಿಗಳ ಸ್ವಯಾರ್ಜಿತ ಸ್ವತ್ತು ಗಳಾಗಿರುತ್ತವೆ. ಅದೇ ರೀತಿ 6, 7 ಮತ್ತು 8ನೇ ಷೆಡ್ಯೂಲ್ ಸ್ವತ್ತುಗಳು 3ನೇ ಪ್ರತಿವಾದಿಯ ಸ್ವಯಾ ರ್ಜಿತ ಆಸ್ತಿಗಳಾಗಿರುತ್ತವೆ. ಇವುಗಳಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. 1 ಮತ್ತು 3ನೇ ಷೆಡ್ಯೂಲ್ ಸ್ವತ್ತುಗಳಲ್ಲಿ ಪ್ರತಿವಾದಿಗಳಿಗೆ ಸಮಾನವಾದ ಹಕ್ಕು ಅಧಿಕಾರ ಇರುತ್ತದೆ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಯಾವುದೇ ಹಕ್ಕ, ಹಿತಾಸಾಕ್ತಿ ಅಧಿಕಾರ ಇರುವುದಿಲ್ಲ. ಪ್ರತಿವಾದಿ ಗಳಿಗೆ ಮೋಸ ಮಾಡಬೇಕೆಂಬ ದುರುದ್ದೇಶದಿಂದ ದಾವಾ ಅನುಸೂಚಿ ಸ್ವತ್ತುಗಳ ವಿಸ್ತೀರ್ಣ ಹಾಗೂ ಸ್ವತ್ತುಗಳ ಚಕ್ಕುಬಂದಿಯನ್ನು ತಪ್ಪಾಗಿ ನಮೂದಿಸಿ ಹಾಗೂ ವ್ಯಾಜ್ಯ ಕಾರಣವನ್ನು ಸೃಷ್ಟಿಸಿ ಸುಳ್ಳು ದಾಖಲಾತಿಗಳ ಆಧಾರದ ಮೇಲೆ ಸುಳ್ಳು ದಾವೆಯನ್ನು ಸಲ್ಲಿಸಿರುವುದಲ್ಲದೆ ಸುಳ್ಳು ಅಂಶಗಳನ್ನು ಒಳ ಗೊಂಡಂತೆ ಮಧ್ಯಂತರ ಅರ್ಜಿ1ನ್ನು ಸಲ್ಲಿರುತ್ತಾರೆ. ಆದ್ದರಿಂದ ವಾದಿಗಳು ಶುದ್ದ ಹಸ್ತದಿಂದ ನ್ಯಾಯಾಲಯಕ್ಕೆ

ಬಾರದೇ ಎಲ್ಲಾ ವಾಸ್ತವ ಅಂಶಗಳನ್ನು ಮರೆಮಾಚಿ ಬಂದಿರುವುದರಿಂದ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಲು ಮನವಿ ಮಾಡಿಕೊಂಡಿರುತ್ತಾರೆ.

4. ಉಭಯಪಕ್ಷಗಾರರ ವಾದ-ವಿವಾದವನ್ನು ಆಲಿಸಲಾಯಿತು. ಲಭ್ಯವಿರುವ ದಾಖಲಾತಿಗಳನ್ನು ಹಾಗೂ ಕಡತದಲ್ಲಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸ ಲಾಯಿತು.

5. ಈ ಮೇಲ್ಕಂಡ ವಾದ-ವಿವಾದಗಳ ಆಧಾರದ ಮೇಲೆ ಈ ನ್ಯಾಯಲಯಕ್ಕೆ ಉದ್ಭವಿಸಬಹುದಾದ ಅಂಶಗಳೆಂದರೇಃ

1) ವಾದಿಗಳು ಈ ದಾವೆಯಲ್ಲಿ ಮೇಲ್ನೋಟಕ್ಕೆ ಸಾಬೀತುಪಡಿಸುವ ದಾವೆಯಾಗಿರುತ್ತದೆಂದು ರುಜುವಾತುಪಡಿಸಿರುತ್ತಾರೆಯೇ?

2) ಈ ದಾವೆಯಲ್ಲಿ ಅನುಕೂಲತೆಯ ಒಲವು ವಾದಿಗಳ ಪರವಾಗಿ ಇದೆ ಎಂದು ವಾದಿಗಳು ರುಜುವಾತುಪಡಿಸುತ್ತಾರೆಯೇ?

3) ಈ ದಾವೆಯಲ್ಲಿ ಮಧ್ಯಂತರ ಆದೇಶವನ್ನು ನೀಡದಿದ್ದ ಪಕ್ಷದಲ್ಲಿ ವಾದಿಗಳಿಗೆ ತುಂಬಲಾರದ ನಷ್ಟ ಮತ್ತು ತೊಂದರೆ ಉಂಟಾಗು ತ್ತದೆಂದು ವಾದಿಗಳು ರುಜುವಾತು ಪಡಿಸಿರುತ್ತಾರೆಯೇ?

4) ಏನು ಆದೇಶ?

6. ಮೇಲಿನ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶಃ 1) ಃ ಸಕಾರಾತ್ಮಕವಾಗಿ
ಅಂಶಃ 2) ಃ ಸಕಾರಾತ್ಮಕವಾಗಿ
ಅಂಶಃ 3) ಃ ಸಕಾರಾತ್ಮಕವಾಗಿ
ಅಂಶಃ 4) ಃ ಅಂತಿಮ ಆದೇಶದಂತೆ,
ಈ ಕೆಳಗಿನ ಕಾರಣಗಳಿಗಾಗಿ,

**ಃಃ ಕಾರಣಗಳು ಃಃ**

7. ಅಂಶ-1 ರಿಂದ 3ಃ- ಈ ಮೂರು ಅಂಶಗಳ ಸಂಗತಿಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡಿರುತ್ತೇನೆ.

8. ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಿಭಾಗಾಂಶವನ್ನು ಹಾಗೂ ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಅದರೊಂದಿಗೆ ಮಧ್ಯಂತರ ಅರ್ಜಿ 1ನ್ನು ಸಹಾ ಸಲ್ಲಿಸಿರುತ್ತಾರೆ. ವಾದಿಗಳು ತಮ್ಮ ಮಧ್ಯಂತರ ಅರ್ಜಿ 1ರ ಪ್ರಮೊಣಪತ್ರದಲ್ಲಿ ತಿಳಿಸಿರುವಂತೆ ದಾವಾ ಆಸ್ತಿಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ವಸ್ತುಸ್ಥಿತಿ ಹೀಗಿರುವಾಗ 3ನೇ ಪ್ರತಿವಾದಿಯು 1ನೇ ವಾದಿಯನ್ನು ಮತ್ತು 2 ರಿಂದ 4ನೇ ವಾದಿಗಳನ್ನು ಮನೆಯಿಂದ ಹೊರ ಹಾಕಿ 2 ರಿಂದ 4ನೇ ವಾದಿಗಳಿಗೆ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಕಾನೂನುಬದ್ಧವಾಗಿ ಸೇರಬೇಕಾದ ವಿಭಾಗಾಂಶದ ಹಕ್ಕನ್ನು ದುರುಪಯೋಗ ಪಡಿಸಿಕೊಂಡು ದಾವಾ ಅನುಸೂಚಿ ಸ್ವತ್ತುಗಳ ಖಾತೆಯನ್ನು ಕಂದಾಯ ಇಲಾಖಾ ಅಧಿಕಾರಿಗಳೊಂದಿಗೆ ಶಾಮೀಲಾಗಿ ಅವರ ಹೆಸರಿಗೆ ಜಂಟಿ ಖಾತೆಯನ್ನು ಬದಲಾವಣೆ ಮಾಡಿಕೊಂಡು ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ಒಂದು ವೇಳೆ ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತುಗಳನ್ನು ಮಾರಾಟ ಮಾಡಿದರೆ ವಾದಿಗಳಿಗೆ ತುಂಬಲಾರದ ನಷ್ಟ ಹಾಗೂ ತೊಂದರೆ ಉಂಟಾಗುತ್ತದೆ ಎಂದು ಮಧ್ಯಂತರ ಅರ್ಜಿ 1ರ ಪ್ರಮಾಣ ಪತ್ರದಲ್ಲಿ ಪ್ರತಿಪಾದಿಸಿರುತ್ತಾರೆ.

9. ವಾದಿಗಳು ಮಧ್ಯಂತರ ಅರ್ಜಿ 1 ರ ಅಂಶಗಳನ್ನು ಮೇಲ್ನೋಟಕ್ಕೆ ಸಾಬೀತುಪಡಿಸುವ ದಿಶೆಯಲ್ಲಿ ಹಲವಾರು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

ಅವುಗಳ ಪೈಕಿ ಸರ್ವೆ ನಂಬರ್ 69ಃ59ರ ಗಣೀಕೀಕೃತ ಪಹಣಿ, ಸರ್ವೆ ನಂಬರ್ 67ರ ಗಣೀಕೀಕೃತ ಪಹಣಿ, ಸರ್ವೆ ನಂಬರ್ 69ರ ಇನ್ನೊಂದು ಗಣೀಕೀಕೃತ ಪಹಣಿ, ಸರ್ವೆ ನಂಬರ್ 10ರ ಗಣೀಕೀಕೃತ ಪಹಣಿ, ಸರ್ವೆ ನಂಬರ್ 58ಃ1ಎ ರ ಗಣೀಕೀಕೃತ ಪಹಣಿ, ಸರ್ವೆ ನಂಬರ್ 58ಃ2ಪಿ ರ ಗಣೀಕೀಕೃತ ಪಹಣಿ, ಆಸ್ತಿ ತೆರಿಗೆ ರಿಜಿಸ್ಟರ್‌ನ ಅಸೆಸೆಮಂಟ್ ನಂಬರ್ 1167ಃ1895, ಇನ್ನೊಂದು ಆಸ್ತಿ ತೆರಿಗೆ ರಿಜಿಸ್ಟರ್‌ನ ನಂಬರ್ಃ ಅಸೆಸಮೆಂಟ್ ನಂಬರ್ 1166ಃ1894 ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

10. ಅದೇರೀತಿ ಪ್ರತಿವಾದಿಗಳು ಮಧ್ಯಂತರ ಅರ್ಜಿ 1ರ ಮೇಲೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ವಾದಿಗಳಿಗೆ ದಾವಾ ಅನುಸೂಚಿ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಂಬಂಧ ಇರುವುದಿಲ್ಲ. ವಾದಿಗಳಿಗೆ ಕೇವಲ 1 ಮತ್ತು 3ನೇ ಷೆಡ್ಯೂಲ್ ಸ್ವತ್ತುಗಳಲ್ಲಿ ಮಾತ್ರ ಹಕ್ಕು ಮತ್ತು ಹಿತಾಸಂಬಂಧ ಇರುತ್ತದೆ. 4 ಮತ್ತು 5ನೇ ಷೆಡ್ಯೂಲ್ ಸ್ವತ್ತುಗಳು 3 ಮತ್ತು 6ನೇ ಪ್ರತಿವಾದಿಗಳ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ. ಅದೇ ರೀತಿ 6, 7 ಮತ್ತು 8ನೇ ಷೆಡ್ಯೂಲ್ ಸ್ವತ್ತುಗಳು 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ. ಇವುಗಳಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. 1 ಮತ್ತು 3ನೇ ಷೆಡ್ಯೂಲ್ ಸ್ವತ್ತುಗಳಲ್ಲಿ ಪ್ರತಿವಾದಿಗಳಿಗೆ ಸಮಾನವಾದ ಹಕ್ಕು ಅಧಿಕಾರ ಇರುತ್ತದೆ. ವಾದಿಗಳು ಪ್ರತಿವಾದಿಗಳಿಗೆ ಮೋಸ ಮಾಡಬೇಕೆಂಬ ದುರುದ್ದೇಶದಿಂದ ದಾವಾ ಅನುಸೂಚಿ ಸ್ವತ್ತುಗಳ ವಿಸ್ತೀರ್ಣ ಹಾಗೂ ಸ್ವತ್ತುಗಳ ಚಕ್ಕುಬಂದಿಯನ್ನು ತಪ್ಪಾಗಿ ನಮೂದಿಸಿ ಹಾಗೂ ವ್ಯಾಜ್ಯ ಕಾರಣವನ್ನು ಸೃಷ್ಟಿಸಿ ಸುಳ್ಳು ದಾಖಲಾತಿಗಳ ಆಧಾರದ ಮೇಲೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆಂದು ಪ್ರತಿಪಾದಿಸಿರುತ್ತಾರೆ. ಅದೇರೀತಿ ಪ್ರತಿವಾದಿಗಳು ತಮ್ಮ ನಿಲುವನ್ನು ಸಾಬೀತುಪಡಿಸುವ ದಿಶೆಯಲ್ಲಿ ದಿಃ 9.4.2008ರ ಶುದ್ಧಕ್ರಯ ಪತ್ರದ ಜೆರಾಕ್ಸ್ ಪ್ರತಿ, ದಿಃ 4.12.2014ರ ಕ್ರಯಪತ್ರದ ಪ್ರತಿ, ದಿಃ 8.3.2012ರ ಶುದ್ದ ಕ್ರಯಪತ್ರದ ಜೆರಾಕ್ಸ್ ಪ್ರತಿ, ದಿಃ 20.9.2006ರ ಶುದ್ದ ಕ್ರಯಪತ್ರದ ಜೆರಾಕ್ಸ್ ಪ್ರತಿಯನ್ನು ಹಾಗೂ ನಾಲ್ಕು ಪಹಣಿ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

**11.** **ಈ ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಮತ್ತು ಕಡತದಲ್ಲಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಪ್ರತಿವಾದಿಗಳು ತಮ್ಮ ತಕರಾರು ಅರ್ಜಿಯಲ್ಲಿ ವಾದಿಗಳು ಮತ್ತು ಪ್ರತಿವಾದಿಗಳ ಸಂಬಂಧಗಳನ್ನು ಒಪ್ಪಿಕೊಂಡಿರುವುದು ಕಂಡು ಬರುತ್ತದೆ. ಅದೇರೀತಿ ಪ್ರತಿವಾದಿಗಳ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ದಾವಾ ಅನುಸೂಚಿ ಸ್ವತ್ತುಗಳ ಪೈಕಿ 1 ಮತ್ತು 3ನೇ ದಾವಾ ಅನುಸೂಚಿ ಸ್ವತ್ತುಗಳು ಮಾತ್ರ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಉಳಿದ್ದೆಲ್ಲಾ ದಾವಾ ಅನುಸೂಚಿ ಸ್ವತ್ತುಗಳು 3 ಮತ್ತು 6ನೇ ಪ್ರತಿವಾದಿಗಳ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ. ಆದ್ದರಿಂದ ಘನ ನ್ಯಾಯಾಲಯವು ತಾತ್ಕಾಲಿಕ ತಡೆಯಾಜ್ಞೆಯ ಮೂಲಕ 1 ಮತ್ತು 3ನೇ ದಾವಾ ಅನುಸೂಚಿ ಸ್ವತ್ತುಗಳನ್ನು ಬೇರೆ ಯಾರಿಗೂ ಸಹಾ ಪರಭಾರೆ ಮಾಡದಂತೆ ಆದೇಶವನ್ನು ಮಾಡಬಹುದೆಂದು ವಾದಮಂಡನೆ ಮಾಡಿರುತ್ತಾರೆ. ಅದೇರೀತಿ ವಾದಿಗಳ ಪರ ವಕೀಲರು ತಮ್ಮ ವಾದಮಂಡನೆಯಲ್ಲಿ ದಾವಾ ಅನುಸೂಚಿ ಸ್ವತ್ತುಗಳು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ವಾದಿಗಳು ಮತ್ತು ಪ್ರತಿವಾದಿಗಳಿಗೆ ಸದರಿ ಸ್ವತ್ತುಗಳ ಮೇಲೆ ಕಾನೂನುಬದ್ಧ ಸಮಾನವಾದ ಹಕ್ಕು ಮತ್ತು ಹಿತಾಸಕ್ತಿ ಇರುತ್ತದೆ ಎಂದು ವಾದ ಮಂಡನೆ ಮಾಡಿರುತ್ತಾರೆ. ಅದರಂತೆ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ 2ನೇ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಸರ್ವೆ ನಂಬರ್ 67ರ ಗಣೀಕೀ ಕೃತ ಪಹಣಿಯನ್ನು ಹಾಜರುಪಡಿಸಿದ್ದು, ಇದರ ಪ್ರಕಾರ ಕೇವಲ 20 ಗುಂಟೆ ಜಮೀನು ಇರುವುದು ಕಂಡು ಬಂದಿರುತ್ತದೆ. ಆದರೆ ದಾವಾ ಅನುಸೂಚಿ ಸ್ವತ್ತಿನಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 20 ಗುಂಟೆ ಎಂದು ನಮೂದು ಮಾಡಿರುತ್ತಾರೆ. ಉಳಿದ ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ 3ನೇ ಪ್ರತಿವಾದಿಯು ಮೇಲ್ನೋಟಕ್ಕೆ ಸ್ವತಃ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿರುವ ಬಗ್ಗೆ ಕಂಡು ಬಂದಿರುತ್ತದೆ.**

12. ಆದಾಗ್ಯೂ ದಾವಾ ಅನುಸೂಚಿ ಸ್ವತ್ತುಗಳ ಪೈಕಿ 1 ಮತ್ತು 3ನೇ ದಾವಾ ಅನುಸೂಚಿ ಸ್ವತ್ತುಗಳು ಪ್ರತಿವಾದಿಗಳೇ ಒಪ್ಪಿಕೊಂಡಿರುವಂತೆ ಪಿತ್ರಾರ್ಜಿತ ಆಸ್ತಿಗಳಾಗಿ ಕಂಡು ಬಂದಿರುತ್ತವೆ. ಆದರೆ ಉಳಿದ ದಾವಾ ಆಸ್ತಿಗಳು 3 ಮತ್ತು 6ನೇ ಪ್ರತಿವಾದಿಗಳು ಒಟ್ಟು ಕುಟುಂಬ ಹಾಗೂ ಪಿತ್ರಾರ್ಜಿತ ಆಸ್ತಿಯ ಮೂಲಗಳಿಂದ ಖರೀದಿ ಮಾಡಿರುತ್ತಾರೆಯೊ ಅಥವಾ 3 ಮತ್ತು 6ನೇ ಪ್ರತಿವಾದಿಗಳ ಸ್ವಂತ ಆದಾಯದ ಮೂಲಗಳಿಂದ ಖರೀದಿ ಮಾಡಿರುತ್ತಾರೆಯೋ ಎಂಬ ಸಂಗತಿಗಳನ್ನು ಸಿದ್ಧಪಡಿಸಿ ರುಜುವಾತುಪಡಿಸುವ ಹೊಣೆಗಾರಿಕೆಯು ಪ್ರತಿವಾದಿಗಳ ಮೇಲಿರುತ್ತದೆ. ಸದರಿ ಉಳಿದ ದಾವಾ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ಸಂಗತಿಗಳನ್ನು ಆಧಾರದ ಮೇಲೆ 3 ಮತ್ತು 6ನೇ ಪ್ರತಿವಾದಿಗಳು ಈ ದಾವೆಯು ವಿಚಾರಣೆಗಾಗಿ ಬಾಕಿ ಇರುವ ಅವಧಿಯಲ್ಲಿ ಉದ್ದೇಶಪೂರ್ವಕವಾಗಿ ಮಾರಾಟ ಯಾ ಪರಭಾರೆ ಮಾಡಿದರೆ, ಈ ದಾವೆಯ ವ್ಯಾಪ್ತಿಯೊಳಗೆ ಒಳಪಡುತ್ತದೆ ಎಂದು ಭಾವನೆ ಮಾಡುವುದಾಗಿರುತ್ತದೆ.

13. ವಾದಿಗಳು ಮತ್ತು ಪ್ರತಿವಾದಿಗಳಿಬ್ಬರು ಹಾಜರುಪಡಿಸಿರುವ ದಾಖಲಾತಿಗಳ ಅನುಸಾರ 1 ಮತ್ತು 3ನೇ ದಾವಾ ಅನುಸೂಚಿ ಸ್ವತ್ತುಗಳನ್ನು ಹೊರತುಪಡಿಸಿ ಉಳಿದ ದಾವಾ ಅನುಸೂಚಿ ಸ್ವತ್ತುಗಳು ಮೇಲ್ನೋಟಕ್ಕೆ 3 ಮತ್ತು 6ನೇ ಪ್ರತಿವಾದಿಗಳು ವಿವಿಧ ದಿನಾಂಕಗಳಲ್ಲಿ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಸದರಿ ಆಸ್ತಿಗಳು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳೆಂದು ರುಜುವಾತುಪಡಿಸುವ ಹೊಣೆಗಾರಿಕೆಯು ಈ ದಾವೆಯಲ್ಲಿ ವಿವಾದಾಂಶಗಳನ್ನು ರಚಿಸಿದ ನಂತರ ವಾದಿಗಳ ಮೇಲೆ ಇರುತ್ತದೆ. ಈ ಎಲ್ಲಾ ಕಾರಣಗಳಿಂದ ದಾವಾ ಅನುಸೂಚಿ ಸ್ವತ್ತುಗಳ ಮೇಲೆ ವಾದಿಗಳಿಗೆ ಸೇರತಕ್ಕ ಕಾನೂನುಬದ್ಧ ವಿವಾಧಾಂಶದ ಹಕ್ಕನ್ನು ಈ ದಾವೆಯಲ್ಲಿ ಪೂರ್ಣಪ್ರಮಾಣದ ಸಾಕ್ಷ್ಯ ವಿಚಾರಣೆಯುನ್ನು ಮುಗಿಸಿದ ನಂತರ ಇತ್ಯರ್ಥಪಡಿಸುವುದಾಗಿರುತ್ತದೆ. ಆದ್ದರಿಂದ ಅಂಶ 1 ರಿಂದ 3ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**14. <u>ಅಂಶ-4:</u> ಮೇಲಿನ ಅಂಶ 1 ರಿಂದ 3ಕ್ಕೆ ನೀಡಿದ ಉತ್ತರಕ್ಕೆ ಅನುಗುಣವಾಗಿ, ಈ ಕಳಕಂಡಂತೆ ಆದೇಶ ಮಾಡಲಾಗಿದೆ.**

**<u>ಆದೇಶ</u>**

**ವಾದಿಗಳು ದಿವಾಣಿ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಹಾಗೂ ಕಲಂ 151 ರ ರೀತ್ಯಾ ಸಲ್ಲಿಸಲಾದ ಅರ್ಜಿಯನ್ನು ಪುರಸ್ಕರಿಸಲಾಗಿದೆ.**

**ಅದರಂತೆ ದಾವಾ ಅನುಸೂಚಿ ಸ್ವತ್ತು 1 ಮತ್ತು 3ನೇ ಸ್ವತ್ತುಗಳನ್ನು ಪ್ರತಿವಾದಿಗಳು ಈ ನ್ಯಾಯಾಲಯದ ಮುಂದಿನ ಆದೇಶವಾಗುವವರೆಗೂ ಬೇರೆ ಯಾರಿಗೂ ಸಹಾ ಪರಭಾರೆ ಯಾ ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಮೂಲಕ ಪ್ರತಿಬಂಧಿಸಲಾಗಿದೆ.**

**(ಈ ಮೇಲಿನ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ತದನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ: 24ನೇ ಫೆಬ್ರುವರಿ 2018 ರಂದು ಘೋಷಿಸಿರುತ್ತೇನೆ.)**

**(ಕೇಶವ. ಕೆ)**
**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ಹೆಚ್.ಡಿ.ಕೋಟೆ.**